35

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಸಿ. ವೇಣುಗೋಪಾಲ್ ಇವರು ನಿಯಮ 330 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

**ಪ್ರಶ್ನೆ:-** ಉಡುಪಿ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಂತೆ ವಿವಿಧ ವರ್ಗದ ಸಮುದಾಯ ಭವನಗಳಿಗೆ ಬಿಡುಗಡೆ ಮಾಡಿದ ಅನುದಾನ ಹಾಗೂ ಅವುಗಳ ಕಾರ್ಯಪ್ರಗತಿ ವಿವರದ ಕುರಿತು ಹಾಗೂ ಸರ್ಕಾರದ ಅನುದಾನ ಪಡೆದ ಸಮುದಾಯ ಭವನಗಳ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುವ ಲೋಪದೋಷಗಳು ಕೆಲ ಸಮುದಾಯ ಭವನಗಳ ನಿರ್ವಹಣೆ, ನಿರ್ಮಾಣ, ನಿವೇಶನ ಖರೀದಿಯಲ್ಲಿ ಅವ್ಯವಹಾರ ಹಾಗೂ ಸಾರ್ವಜನಿಕರಿಂದ ಪಡೆದ ಕೋಟ್ಯಾಂತರ ರೂಪಾಯಿಗಳ ವಂತಿಗೆ ಹಣಕ್ಕೆ ಕೆಲವು ಸಮುದಾಯದ ಅಧ್ಯಕ್ಷರು ಲೆಕ್ಕ ನೀಡದಿರುವುದು ಮುಂತಾದ ವಿಚಾರದಲ್ಲಿ ಜಿಲ್ಲಾಧಿಕಾರಿ ಉಡುಪಿ ಇವರಿಗೆ ಬಂದಿರುವ ದೂರುಗಳ ಹಾಗೂ ಕೆಲ ಸಮುದಾಯದ, ಸಮುದಾಯ ಭವನಗಳು ಅವಶ್ಯಕತೆಗಿಂತ ಹೆಚ್ಚಿನ ಸಾಲಮಾಡಿ ಸದರಿ ಸಾಲದ ಬಡ್ಡಿ ತೀರಿಸಲಾಗದೆ ಹರಾಜು ಮಾಡುವ ಸ್ಥಿತಿಗೆ ಬಂದಿರುವ ಬಗ್ಗೆ ಈ ಅವ್ಯವಹಾರದಲ್ಲಿ ಭಾಗಿಯಾಗಿರುವವರ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮತ್ತು 4 ಕೋಟಿಗೆ ಆಗುವ ಸಮುದಾಯ ಭವನಕ್ಕೆ ಅದರ ದುಪ್ಪಟ್ಟಿನಷ್ಟು ಅಂದಾಜು ತಯಾರಿಸಿ ಹಣ ವಂಚಿಸಿರುವ ಪ್ರಕರಣಗಳ ಬಗ್ಗೆ ಶೋಧ ನಡೆಸಿ ಅವುಗಳನ್ನು ಪತ್ತೆ ಹಚ್ಚಿ ಲೂಟಿಕೋರರನ್ನು ಶಿಕ್ಷಿಸುವ ಬಗ್ಗೆ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

*****

**ಉತ್ತರ:-** ಪರಿಶಿಷ್ಟ ಜಾತಿ ಶಿಕ್ಷಣ ಮತ್ತು ಇತರೆ ಸಂಸ್ಥೆಗಳಿಗೆ ಶಾಲಾ ಕಟ್ಟಡ / ಸಮುದಾಯ ಭವನಗಳಿಗೆ ಅನುದಾನ ನೀಡುವ ಕಾರ್ಯಕ್ರಮದಡಿಯಲ್ಲಿ ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ 02 ಸಮುದಾಯ ಭವನಗಳು ಮಂಜೂರಾಗಿದ್ದು, ಸದರಿ ಭವನಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದೆ.

| ಕ್ರ. ಸಂ. | ಸಂಸ್ಥೆಯ ವಿವರ | ವರ್ಷ | ಕಾಮಗಾರಿ ವಿವರ | ನಿಗಧಿ | ಬಿಡುಗಡೆಯಾದ ಅನುದಾನ | ವೆಚ್ಚ | ಪ್ರಗತಿ ಹಂತ |
|---|---|---|---|---|---|---|---|
| 1 | ಪರಿಶಿಷ್ಟ ಜಾತಿ ಮಹಿಳಾ ಮೀನುಗಾರರ ವಿವಿದ್ದೋದ್ದೇಶ ಸಹಕಾರ ಸಂಘ (ರಿ), ಮಲ್ಪೆ ತೊಟ್ಟಂ, ಉಡುಪಿ | 2016-17 ಮತ್ತು 2017-18 | ಉಡುಪಿ ತಾಲ್ಲೂಕಿನ ಮಲ್ಪೆ ತೊಟ್ಟಂ ಸಮುದಾಯ ಭವನ | 130.00 | 130.00 | 130.00 | ಮುಕ್ತಾಯ ಹಂತದಲ್ಲಿರುತ್ತದೆ. |

--------------------2

| | | | | | | | |
|---|---|---|---|---|---|---|---|
| 2 | ಅಂಬೇಡ್ಕರ್ ಸಮುದಾಯ ಸಂಘ (ರಿ), ಪಡುತೋನ್ಸೆ, ಗುಜ್ಜರಬೆಟ್ಟು, ಕೆಮ್ಮಣ್ಣು ಅಂಚೆ, ಉಡುಪಿ | 2018-19 | ಉಡುಪಿ ತಾಲ್ಲೂಕಿನ ಗುಜ್ಜರಬೆಟ್ಟು ಸಮುದಾಯ ಭವನ | 50.00 | 50.00 | 25.00 | ಲಿಂಟಲ್ ಹಂತದಲ್ಲಿರುತ್ತದೆ. |

ಡಾ ಬಿ.ಆರ್ ಅಂಬೇಡ್ಕರ್ / ಡಾ ಬಾಬುಜಗಜೀವನರಾಂ / ಸಮುದಾಯ ಭವನಗಳ ನಿರ್ಮಾಣ ಕಾರ್ಯಕ್ರಮದಡಿ ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ, 2012-13ನೇ ಸಾಲಿನಿಂದ 2019-20ನೇ ಸಾಲಿನವರೆಗೆ 36 ಸ್ಥಳಗಳಲ್ಲಿ ಒಟ್ಟಾರೆ ರೂ.716.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾ ಬಿ.ಆರ್ ಅಂಬೇಡ್ಕರ್ / ಡಾ ಬಾಬು ಜಗಜೀವನರಾಂ ಭವನಗಳನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಿ, ಭಾಗಶಃ ಅನುದಾನ ರೂ.407.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಸಂಬಂಧ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಭವನಗಳ ಸಂಖ್ಯೆ | ಮಂಜೂರಾತಿ ಮೊತ್ತ | ಬಿಡುಗಡೆ ಮಾಡಿದ ಮೊತ್ತ | ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ | ವೆಚ್ಚ | ಭವನಗಳ ಸಂಖ್ಯೆ | | |
|---|---|---|---|---|---|---|---|---|
| | | | | | | ಪೂರ್ಣ | ಪ್ರಗತಿ | ಪ್ರಾರಂಭಿಸಬೇಕಾದ |
| 1 | 36 | 716.00 | 407.00 | 309.00 | 244.74 | 18 | 4 | 14 |

ಉಡುಪಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯವತಿಯಿಂದ ಮಂಜೂರಾದ ಡಾ ಬಿ.ಆರ್ ಅಂಬೇಡ್ಕರ್ / ಡಾ ಬಾಬು ಜಗಜೀವನರಾಂ ಸಮುದಾಯ ಭವನಗಳ ಕಾಮಗಾರಿಗಳನ್ನು ಸರ್ಕಾರಿ ನಿರ್ಮಾಣ ಏಜೆನ್ಸಿ / ಇಲಾಖೆ ಮುಖಾಂತರ ನಿರ್ಮಾಣ ಮಾಡಲಾಗುತ್ತಿದೆ. ಸದರಿ ಭವನಗಳ ಕಾಮಗಾರಿಗಳು ಪೂರ್ಣಗೊಂಡ ನಂತರ ಸರ್ಕಾರದ ಆದೇಶದಂತೆ ಸಮಿತಿಗಳನ್ನು ರಚಿಸಿ ನಿರ್ವಹಣೆಯನ್ನು ಮಾಡಲಾಗುತ್ತಿದೆ.

ಉಡುಪಿ ಜಿಲ್ಲೆಯ ಎಲ್ಲಾ ಅಂಬೇಡ್ಕರ್ / ಸಮುದಾಯ ಭವನಗಳು ಸರ್ಕಾರಿ ಜಾಗದಲ್ಲಿ ನಿರ್ಮಿಸಲಾಗಿದ್ದು ಯಾವುದೇ ಖಾಸಗಿ ಜಮೀನು ಖರೀದಿಸಿ ನಿರ್ಮಿಸಲಾಗಿರುವುದಿಲ್ಲ. ಉಡುಪಿ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಅಂಬೇಡ್ಕರ್ / ಸಮುದಾಯ ಭವನಗಳಿಂದ ವಂತಿಗೆ ಹಣ ಪಡೆದು ನಿರ್ವಹಣೆ ಮಾಡುತ್ತಿಲ್ಲ. ಉಡುಪಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಂಬೇಡ್ಕರ್ / ಸಮುದಾಯ ಭವನಗಳು ಸಾಲ ಮಾಡಿ ಹರಾಜು ಮಾಡುವ ಸ್ಥಿತಿಗೆ ಬಂದಿರುವುದಿಲ್ಲ.

---------3